ಮಾಡುತ್ತೇವೆ. ಇವೆಲ್ಲಾ ಕೆಲಸಗಳಿಗೆ ಅನುಮೋದನೆ ಕೊಡಿಸುತ್ತೇವೆ. ಅನೇಕ ಜಿಲ್ಲೆಗಳಲ್ಲಿ ಹೋದ ವರ್ಷದ ಕೆಲಸಗಳು ಅಗಿಲ್ಲವೆಂದು ಅನೇಕ ಜನ ಗೌರವಾನ್ವಿತ ಶಾಸಕರು ಬೇಸರದಲ್ಲಿದ್ದಾರೆ. ಕೆಲಸಗಳೆಲ್ಲಾ ನಿಂತು ಹೋಗಿವೆ, ನಾವು ಹೊಸದಾಗಿ ಗೆದ್ದು ಬಂದಿದ್ದೇವೆ, ಎಲಕ್ಷನ್ ಆಗಿ ಎರಡು ತಿಂಗಳಾಯಿತು, ಯಾವುದೇ ಕೆಲಸ ನಡೆದಿಲ್ಲ ಎನ್ನತಕ್ಕಂತಹ ದೂರುಗಳು ಬಂದಿವೆ. ಅದಕ್ಕೋಸ್ಕರವಾಗಿ ಅದೆಲ್ಲಾ ಕೆಲಸಗಳು ಪ್ರಾರಂಭ ಮಾಡಲಿಕ್ಕೆ ನಾವು ಇಂಜಿನಿಯರ್‌ಗಳಿಗೆ ಜಿಲ್ಲಾಧಿಕಾರಿಗಳಿಗೆ, ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಿಗೆ ಸ್ಪಷ್ಟವಾದ ಸೂಚನೆಯನ್ನು ಕಳುಹಿಸುವವರಿದ್ದೇವೆ, ಇದು ಮೊದಲನೆಯದು. ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿರತಕ್ಕಂತಹ ವಿಚಾರವೂ ಸತ್ಯ. ಅದರಲ್ಲಿಯೂ ಗಡಿನಾಡಿನ ಪ್ರದೇಶ, ಬಹಳ ಹಿಂದುಳಿದಿರತಕ್ಕಂತಹ ಪ್ರದೇಶ, ಬರಗಾಲದಿಂದ ಹಲವಾರು ವರ್ಷಗಳಿಂದ ತೊಂದರೆಗೀಡಾಗಿರತಕ್ಕಂತಹ ಜಿಲ್ಲೆ. ತೆಂಗು ಮತ್ತು ರೇಷ್ಮೆ ಹಾಳಾಗಿರುವುದು ಸತ್ಯವಾದ ಮಾತ್ರ. 2000 ಕೊಳವೆ ಬಾವಿಗಳು ಒಂದು ವರ್ಷದಿಂದ ರಿಪೇರಿಯಾಗಿಲ್ಲವೆಂದು ಹೇಳೀದ್ದಾರೆ, 2000 ಕೊಳವೆ ಬಾವಿಗಳು ಹಾಳಾಗಿವೆ, ಅಥವಾ ಅದೆಷ್ಟು ಹಾಳಾಗಿವೆ ಎಂಬುದು ನನಗೆ ಗೊತ್ತಿಲ್ಲ, ಅವರ ಮಾಹಿತಿಯನ್ನು ನಾನು ನಂಬುತ್ತೇನೆ. ಕೊಳವೆ ಬಾವಿಗಳಲ್ಲಿ ಎಲ್ಲೆಲ್ಲಿ ನೀರು ಇದೆ, ಎಲ್ಲೆಲ್ಲಿ ರಿಪೇರಿ ಮಾಡುವುದಕ್ಕೆ ಸಾಧ್ಯ ಇದೆ, ಎಲ್ಲಿ ರಿಪೇರಿ ಮಾಡಬಹುದು. ಅದರ ಬಗ್ಗೆ ತಕ್ಷಣ ಸರ್ಕಾರದಿಂದ ಸೂಚನೆ ಕೊಟ್ಟು ಸಂಬಂಧಪಟ್ಟ ಇಂಜಿನಿಯರ್‌ಗಳಿಗೆ ಮತ್ತು ಅಧಿಕಾರಿಗಳಿಗೆ ತಿಳಿಸಿ ಸರಿಮಾಡಿಸತಕ್ಕಂತಹ ಭರವಸೆಯನ್ನು ಕೂಡ ಕೊಡುತ್ತೇವೆ. ಮಾನ್ಯ ಬಾಲರಾಜ್‌ರವರು ಚಾಮರಾಜ ನಗರ ಜಿಲ್ಲೆಯಲ್ಲಿ ಕೆಲವೆಲ್ಲಾ ಕೆಲಸಗಳು ಸಮರ್ಪಕವಾಗಿ ನಡೆದಿಲ್ಲವೆಂದು ತಿಳಿಸಿದ್ದೀರಿ. ಅನೇಕ ಸದಸ್ಯರುಗಳು ಮಾತನಾಡಿ ಕೆಲಸಗಳು ಸಮರ್ಪಕವಾಗಿ ನಡೆದಿಲ್ಲವೆಂದು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಅದಕ್ಕೋಸ್ಕರವೇ ಈ ಸಚಿವ ಸಂಪುಟದ ಉಪ ಸಮಿತಿಯನ್ನು ಮಾಡಿ ಯಾವುದೇ ರೀತಿಯ ದೂರು ಬರದ ಹಾಗೆ ಕೇಂದ್ರ ಸರ್ಕಾರದಿಂದ ಬರತಕ್ಕಂತಹ ಕಾಳನ್ನು ಮತ್ತು ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡತಕ್ಕಂತಹ ಹಣವನ್ನು ಮತ್ತು ಅಸೆಟ್ ಕ್ರಿಯೇಟ್ ಮಾಡತಕ್ಕಂತಹ ಕೆಲಸವನ್ನು ನಾವು ಮಾಡುತ್ತೇವೆ ಎನ್ನತಕ್ಕಂತಹ ಭರವಸೆಯನ್ನು ತಮ್ಮ ಮೂಲಕ ಗೌರವಾನ್ವಿತ ಸದಸ್ಯರಿಗೆ ಕೊಡುತ್ತೇನೆ.

(VI) ವಿಷಯ : ರಾಷ್ಟ್ರೀಯ ಸಾಮಾಜಿಕ ನೆರವು ಯೋಜನೆಯಡಿ ಚಾಮರಾಜನಗರ ಜಿಲ್ಲೆಗೆ ಪರಿಹಾರ ಕುರಿತು

† **ಶ್ರೀ ಆರ್. ಧ್ರುವನಾರಾಯಣ (ಸಂತೇಮಾರ ಹಳ್ಳಿ) :** ಮಾನ್ಯ ಅಧ್ಯಕ್ಷರೆ, ರಾಷ್ಟ್ರೀಯ ಸಾಮಾಜಿಕ ನೆರವು ಯೋಜನೆಯಡಿಯಲ್ಲಿ ಚಾಮರಾಜನಗರ ಜಿಲ್ಲೆಗೆ ಪರಿಹಾರ ನೀಡಲಿರುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯುತ್ತೇನೆ.

† **ಶ್ರೀ ಪಿ.ಜಿ.ಆರ್. ಸಿಂಧ್ಯಾ(ಬೃಹತ್ ಮಧ್ಯಮ ಹಾಗೂ ಸಣ್ಣ ಕೈಗಾರಿಕಾ ಸಚಿವರು):** ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಸಚಿವರ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ತಮ್ಮ ಅಪ್ಪಣೆ ಪಡೆದು ನೀಡಬಯಸುತ್ತೇನೆ.

ರಾಷ್ಟ್ರೀಯ ಕುಟುಂಬ ನೆರವು ಯೋಜನೆಯು, ರಾಷ್ಟ್ರೀಯ ಸಾಮಾಜಿಕ ನೆರವು ಯೋಜನೆಯಡಿಯಲ್ಲಿನ ಒಂದು ಕಾರ್ಯಕ್ರಮವಾಗಿದ್ದು, ಆಗಸ್ಟ್ 1995 ರಿಂದ ರಾಜ್ಯದಲ್ಲಿ ಜಾರಿಯಲ್ಲಿರುತ್ತದೆ. ಈ ಯೋಜನೆಯಡಿಯಲ್ಲಿ ಬಡತನರೇಖೆಗಿಂತ ಕೆಳಗಿನ ಕುಟುಂಬದಲ್ಲಿ ಪ್ರಾಮುಖ್ಯವಾಗಿ ಜೀವನಾಧಾರಗಳಿಸುವ ಆಕಾಲಿಕ ಮರಣ ಹೊಂದಿದಲ್ಲಿ ಆ ವ್ಯಕ್ತಿಯ ಕುಟುಂಬಕ್ಕೆ 10,000–00 ರೂ.ಗಳ ಸಹಾಯ ಧನವನ್ನು ನೀಡಲಾಗುತ್ತಿದೆ. ಆ ವ್ಯಕ್ತಿ 18 ರಿಂದ 65 ವರ್ಷದೊಳಗಿನ ವಯೋಮಿತಿಯಲ್ಲಿದ್ದು, ಅವರ ಕುಟುಂಬದ ವಾರ್ಷಿಕ ವರಮಾನ ರೂ 10,500–00 ಗಳಿಗಿಂತ ಕಡಿಮೆ ಇರಬೇಕಾಗುತ್ತದೆ. ಈ ಯೋಜನೆಯನ್ನು ಇತ್ತೀಚೆಗೆ ಕೇಂದ್ರದಿಂದ ರಾಜ್ಯ ಯೋಜನೆಗೆ ವರ್ಗಾಯಿಸಲ್ಪಟ್ಟಿದೆ.

ರಾಜ್ಯದಲ್ಲಿ ಈ ಯೋಜನೆಯಡಿಯಲ್ಲಿ 2000–01 ರಲ್ಲಿ 621.87 ರೂ.ಲಕ್ಷ ಅನುದಾನದಿಂದ 5970 ಫಲಾನುಭವಿಗಳಿಗೆ ಹಾಗೂ 2001–02ರಲ್ಲಿ 508.41 ಲಕ್ಷ ರೂ.ಗಳ ಅನುದಾನದಿಂದ 4880 ಫಲಾನುಭವಿಗಳಿಗೆ ನೆರವು ನೀಡಲಾಗಿದೆ. 2002–03ನೇ ಸಾಲಿನಲ್ಲಿ ಈ ಯೋಜನೆಗಾಗಿ 422 ಲಕ್ಷ ರೂ.ಗಳನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ : ಕಂಇ 197 ಎಂಎಸ್‌ಟಿ 02 ದಿನಾಂಕ : 23–2–2004 ರಲ್ಲಿ ಹಣವನ್ನು ಬಿಡುಗಡೆ ಮಾಡಲಾಗಿದೆ. ಈ ಆದೇಶದಲ್ಲಿ ಚಾಮರಾಜನಗರ ಜಿಲ್ಲೆಗೆ 8.30 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ವಾರ್ಷಿಕ 649. ಲಕ್ಷ ರೂ.ಗಳ ಅನುದಾನವನ್ನು ನಿಗಧಿಗೊಳಿಸಲಾಗಿದ್ದು, 6490 ಫಲಾನುಭವಿಗಳಿಗೆ ಮಾತ್ರ ಈ ಅನುದಾನ ಸಾಕಾಗುವುದು. ಈ ಯೋಜನೆಯಡಿಯಲ್ಲಿ ಸಹಾಯಧನ ಕೋರಿ ಅನೇಕ ಅರ್ಜಿಗಳು ಬರುತ್ತಿದ್ದು, ಫಲಾನುಭವಿಗಳ ಸಂಖ್ಯೆಯು ವರ್ಷದಿಂದ ವರ್ಷಕ್ಕೆ ವೃದ್ಧಿಯಾಗುತ್ತಿದೆ. ಇದಿಲ್ಲದೆ ಅನೇಕ ಅರ್ಜಿಗಳು ಕೆಲವು ವರ್ಷಗಳಿಂದ ಬಾಕಿ ಉಳಿದಿರುತ್ತವೆ.

ಕೇಂದ್ರ ಸರ್ಕಾರವು ಈ ರೀತಿ ಬಿಡುಗಡೆ ಮಾಡುತ್ತಿರುವ ಹಣ ಹಾಗೂ ಫಲಾನುಭವಿಗಳ ಮೊತ್ತವನ್ನು ನಿಗಧಿಪಡಿಸಿದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಸ್ವೀಕೃತವಾಗುತ್ತಿರುವ ಅರ್ಜಿಗಳನ್ನು ಪರಿಗಣಿಸಲು ಸಾಧ್ಯವಾಗುತ್ತಿಲ್ಲ. ಆದಕಾರಣ ಬಾಕಿ ಇರುವ ಅರ್ಜಿಗಳನ್ನು ಪರಿಗಣಿಸಲು ರೂ 23 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲು ಹಾಗೂ ಇನ್ನು ಮುಂದೆ ಈ ಯೋಜನೆಯಡಿಯಲ್ಲಿ ಅರ್ಜಿಗಳನ್ನು ಪರಿಗಣಿಸಲು ಪ್ರತಿ ವರ್ಷ 15 ಕೋಟಿ ರೂ.ಗಳ ಅನುದಾನವನ್ನು ಒದಗಿಸಲು ಕೇಂದ್ರ ಸರ್ಕಾರವನ್ನು ಕೋರಲಾಗಿದೆ.

ಅದಲ್ಲದೆ 2002–03ನೇ ಸಾಲಿನ ನಂತರದ ಅವಧಿಗೆ ಈ ಯೋಜನೆಯಡಿಯಲ್ಲಿನ ಅರ್ಜಿಗಳನ್ನು ಪರಿಗಣಿಸಲು ಹಣ ಬಿಡುಗಡೆಯಾಗಿ ಆರ್ಥಿಕ ಇಲಾಖೆಯವರಿಗೆ ಸಮಾಲೋಚಿಸಿ ಹಣ ಬಿಡುಗಡೆ ಬಗ್ಗೆ ಕ್ರಮ ಜರುಗಿಸಲಾಗುತ್ತಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ(ಕೈಗಾರಿಕಾ ಸಚಿವರು) : ಮಾನ್ಯ ಅಧ್ಯಕ್ಷರೆ, ಇದು ಮಾನ್ಯ ಕಂದಾಯ ಸಚಿವರ ಪರವಾಗಿ ನಾನು ಕೊಟ್ಟಿರತಕ್ಕಂತಹ ಉತ್ತರ. ಈ

ಹಣ ಬಿಡುಗಡೆಯಾದರೆ ಇರುವುದು ನನ್ನ ಗಮನಕ್ಕೆ ಬಂದಿದೆ, ಆದಷ್ಟು ಬೇಗ ಹಣ ಬಿಡುಗಡೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಆರ್. ಧ್ರುವನಾರಾಯಣ : ಮಾನ್ಯ ಅಧ್ಯಕ್ಷರೆ, ಇದು ಸಮಾರು 2002ನೇ ಇಸವಿಯಿಂದ 1250 ಪ್ರಕರಣಗಳಿಗೆ ಸಂಬಂಧಪಟ್ಟಂತೆ ನಮ್ಮ ಜಿಲ್ಲೆಗೆ ಒಟ್ಟು 1.25 ಕೋಟಿ ರೂಪಾಯಿಗಳು ಬರಬೇಕಾಗಿದೆ. ಇದು ಬಡತನ ರೇಖೆಯಲ್ಲಿ ಇರತಕ್ಕಂತಹ ವಿಧವೆಯರಿಗೆ ಅನುಕೂಲವಾಗತಕ್ಕಂತಹ ಯೋಜನೆ ಇದು. ಯಾರಾದರೂ ಗಂಡ ಸತ್ತು ಹೋದರೆ ತತ್‌ಕ್ಷಣ ಆ ಹೆಣ್ಣು ಮಗಳಿಗೆ 10,000 ರೂಪಾಯಿ ಕೊಡತಕ್ಕರಂತಹ ಒಂದು ಮಹತ್ತರವಾದ ಯೋಜನೆ, ಪ್ರತಿ ವರ್ಷವೂ ಸಾಕಷ್ಟು ಅರ್ಜಿಗಳನ್ನು ತಹಶೀಲ್ದಾರ್ ಮುಖೇನ ತೆಗೆದುಕೊಂಡಿದ್ದಾರೆ. 1550 ಪ್ರಕರಣಗಳು ಇದ್ದರೂ ಕೂಡ ನಮ್ಮ ಜಿಲ್ಲೆಗೆ ಸರಿಯಾದ ರೀತಿಯಲ್ಲಿ ಈ ಯೋಜನೆಯಲ್ಲಿ ಹಣವನ್ನು ಬಿಡುಗಡೆ ಮಾಡಿಲ್ಲ. 1250 ಪ್ರಕರಣಗಳಿಗೆ 1.25 ಕೋಟಿ ರೂಪಾಯಿಗಳನ್ನು ಸರ್ಕಾರ ಏನು ಕೊಡಬೇಕಾಗಿದೆ. ಅದನ್ನು ಸರ್ಕಾರ ತತ್‌ಕ್ಷಣ ಬಿಡುಗಡೆ ಮಾಡಿ, ವಿಧವೆಯರಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿರತಕ್ಕಂತಹ ವಿಚಾರ ಸತ್ಯ ಇದೆ, ಬಹುತೇಕ ಮಾನ್ಯ ಗೌರವಾನ್ವಿತ ಸದಸ್ಯರ ಕ್ಷೇತ್ರಗಳಲ್ಲಿ ಹಣ ಬಾಕಿ ಇರುವುದು ಸರ್ಕಾರದ ಗಮನದಲ್ಲಿದೆ, ತಮ್ಮ ಕ್ಷೇತ್ರದಲ್ಲಿಯೂ ಸ್ವಲ್ಪ ಬಾಕಿ ಇದೆ. ಅರ್ಜಿಗಳು ಬಂದಿರುತ್ತವೆ, ತಾವೂ ಂವ್ಯೂ ಮಾಡುವಾಗ ಗೊತ್ತಾಗುತ್ತದೆ. ಆರ್ಥಿಕ ಇಲಾಖೆಯವರಿಗೆ ಕರೆಸಿ ಸರ್ಕಾರದ ಇತಿ ಮಿತಿಯೊಳಗೆ ಆದಷ್ಟು ಇದನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಕೇಂದ್ರ ಸರ್ಕಾರದಿಂದ ಹಣ ತರಿಸಿಕೊಳ್ಳುವುದಕ್ಕೆ ನಾವು ಮೊನ್ನೆ ಡೆಲ್ಲಿಗೆ ಹೋದಾಗ ಅಲ್ಲಿನ ರೆಸಿಡೆಂಟ್ ಕಮಿಷನರ್ ಜೊತೆ ಮಾತನಾಡಿ ಭಾರತ ಸರ್ಕಾರದ ಸಂಬಂಧಪಟ್ಟ ಇಲಾಖೆಯ ಜೊತೆ ಮಾತನಾಡಿ ಈ ಹಣವನ್ನು ಬೇಗ ಬಿಡುಗಡೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುವುದನ್ನು ನಮ್ಮ ಸರ್ಕಾರ ಮಾಡಿದೆ ಎಂದು ರಾಜ್ಯದ ಜನತೆಯ ಗಮನಕ್ಕೆ ತಮ್ಮ ಮೂಲಕ ತರುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಕೇಂದ್ರ ಸರ್ಕಾರಕ್ಕೆ ಬರೆದು ಪ್ರಸ್ತಾವನೆಯನ್ನು ಕಳುಹಿಸಿದ್ದೀರಿ. ನಮ್ಮ ರಾಜ್ಯ ಸರ್ಕಾರ ಎಷ್ಟು ಬೇಗ ಯಾವಾಗ ಎಷ್ಟು ಹಣವನ್ನು ಬಿಡುಗಡೆ ಮಾಡುತ್ತದೆ ಅಷ್ಟಾದರೂ ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ(ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಇಲ್ಲಿ ಮಾನ್ಯ ಸಚಿವರು ಉತ್ತರ ಕೊಡುವ ಸಮಯದಲ್ಲಿ ನಮ್ಮ ಹತ್ತಿರ ಇರುವಂತಹ ಈ ಕೇಸ್‌ಗಳಿಗೆ ತಾವು 23 ಕೋಟಿ ರೂಪಾಯಿ ಬಿಡುಗಡೆ ಮಾಡಬೇಕು. ಅವರಿಗೆ ತೊಂದರೆ ಯಾವ ತಕ್ಷಣ ಏನಾದರೂ ಅವರಿಗೆ ಪರಿಹಾರ ಕೊಟ್ಟರೆ ಅವರಿಗೆ ಒಂದು ದಾರಿಯಾಗುತ್ತದೆ. ಅವರಿಗೆ ಉಪಯೋಗವಾಗುತ್ತದೆ. ಇದು ಅವರು ಪ್ರಸ್ತಾಪ ಮಾಡಿದರೂ ಸಹ ಇಡೀ 224 ಕ್ಷೇತ್ರಗಳಲ್ಲಿಯೂ ಸಹ ರಾಷ್ಟ್ರೀಯ

ಕುಟುಂಬ ಯೋಜನೆಯಡಿಯಲ್ಲಿ ದುಡ್ಡು ಇಲ್ಲದೆ ಇರುವುದರಿಂದ ನೆರವು ಕೊಡುವುದಕ್ಕಾಗುತ್ತಿಲ್ಲ. ಅದಕ್ಕೆ ನಾವು ನಿಮಗೆ ಒತ್ತಾಯ ಮಾಡುವುದು ರಾಜ್ಯ ಸರ್ಕಾರದಿಂದ ಏನು ಬಿಡುಗಡೆ ಮಾಡಬೇಕು ಅದನ್ನು ತಕ್ಷಣ ಬಿಡುಗಡೆ ಮಾಡಿ, ಕೇಂದ್ರ ಸರ್ಕಾರದ ಕಮಿಟ್‌ಮೆಂಟ್ ಇದೆ. ತಾವು ಈಗಾಗಲೇ ಈ ವರದಿಯನ್ನು ಕೇಂದ್ರ ಸರ್ಕಾರದ ಕೊಟ್ಟಿದ್ದರೆ ನಿಶ್ಚಿತವಾಗಿ ಹಣ ಬರುತ್ತದೆ. ಫಾಲೋ ಮಾಡುವುದರಲ್ಲಿ ಬಹುಶಃ ತಡವಾಗಿರಬಹುದು. ನಮ್ಮ ಅಧಿಕಾರಿಗಳು ಹೋಗಿ ಬೆನ್ನು ಹತ್ತಿ ಕೇಂದ್ರದಿಂದ ಬಿಡುಗಡೆ ಮಾಡಿಸಿಲ್ಲ. ಇದು ಬಿಟ್ಟರೆ ಬೇರೇನೂ ಕಾರಣವಿಲ್ಲ. ಆ ಹಣ ಬರುವವರೆಗೆ ಕಾಯದೆ, ಈಗ ಆಗಿರುವಂತಹ ಪೆಂಡಿಂಗ್ ಕೇಸಸ್ ಏನಿದೆ ಅದಕ್ಕೆ ರಾಜ್ಯ ಸರ್ಕಾರ ಭರ್ತಿ ಮಾಡಿ, ಆಮೇಲೆ ಅದನ್ನು ತರಿಸಿಕೊಳ್ಳುವಂತಹ ಪ್ರಯತ್ನ ಮಾಡಬಹುದು.

ಶ್ರೀಮತಿ ಟಿ. ಭಾಗೀರಥಿ : ಮಾನ್ಯ ಅಧ್ಯಕ್ಷರೆ, ಈ ಯೋಜನೆಯಡಿಯಲ್ಲಿ ಒಂದು ವಿಷಯ ನನಗೆ ಅರ್ಥವಾಗಬೇಕಿದೆ. ಇದರಲ್ಲಿ ಕ್ಷೇತ್ರವಾರು ಸಮಾನಾಂತರವಾಗಿ ಹಣವನ್ನು ಬಿಡುಗಡೆ ಮಾಡುತ್ತೀರೋ ಅಥವಾ ಎಲ್ಲಿ ಹೆಚ್ಚಿನ ಕೇಸ್‌ಗಳು ಇದೆಯೋ ಅದನ್ನು ನೋಡಿಕೊಂಡು ಆ ಆದ್ಯತೆಯ ಮೇಲೆ ಹಣವನ್ನು ಬಿಡುಗಡೆ ಮಾಡುತ್ತಾರೋ ಎಂಬ ಬಗ್ಗೆ ತಿಳಿಸಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ನಂಬರ್ ಆಫ್ ಕೇಸಸ್ ಮೇಲೆ ಹಣವನ್ನು ಬಿಡುಗಡೆ ಮಾಡುತ್ತಾರೆ. ಜಿಲ್ಲಾವಾರು ಇಷ್ಟು ಜಿಲ್ಲೆಗೆ ಎಂದು ಹೇಳಿ ಆ ಜಿಲ್ಲಾವಾರು ಇರತಕ್ಕಂಥ ಡೆಮ್ಯಟಿ ಏನು ರೆಕಮೆಂಡ್ ಮಾಡಿರುತ್ತಾರೆ ಅದರ ಆಧಾರದ ಮೇಲೆ ನಾವು ಹಣವನ್ನು ಬಿಡುಗಡೆ ಮಾಡುತ್ತಿರತಕ್ಕಂಥದ್ದು ಎನ್ನುವುದನ್ನು ನಾನು ಕಡತದ ಮೂಲಕ ತಿಳಿದುಕೊಂಡಿರತಕ್ಕಂಥ ವಿಚಾರವಾಗಿದೆ. ಈಗ ಮಾನ್ಯ ವಿರೋಧ ಪಕ್ಷದ ನಾಯಕರಾಗಿರತಕ್ಕಂಥ ಮಾನ್ಯ ಯಡಿಯೂರಪ್ಪನವರು ಮಾತನಾಡಿ 23 ಕೋಟಿ ರೂಪಾಯಿಗಳನ್ನು ನೀವು ಬಿಡುಗಡೆ ಮಾಡಿಬಿಡಿ, ಆಮೇಲೆ ನೀವು ಕೇಂದ್ರದಿಂದ ತರಿಸಿಕೊಳ್ಳಿ ಎನ್ನತಕ್ಕಂಥ ಸಲಹೆಯನ್ನು ಕೊಟ್ಟಿದ್ದಾರೆ. ನಮ್ಮ ಹಣಕಾಸಿನ ಇತಿಮಿತಿ ಇರತಕ್ಕಂಥ ವಿಚಾರವನ್ನು ನಾನು ಅದಕ್ಕಾಗಿಯೇ ಹೇಳಿದ್ದು. ಇದು ಖಂಡಿತವಾಗಿ ನಿಜವಾದ ಬಡವರಿಗೆ ಈ ಯೋಜನೆಯಿಂದ ಆಗತಕ್ಕಂಥ ದೊಡ್ಡ ಉಪಕಾರವಾಗಿದೆ. ಆದುದರಿಂದ ನಾನು ಹಣಕಾಸಿನ ಸಚಿವರ ಜೊತೆ ಮಾತನಾಡಿ ಎಷ್ಟು ಸಾಧ್ಯವೋ ಅಷ್ಟು ಬೇಗ ಬಿಡುಗಡೆ ಮಾಡುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ರಾಜ್ಯ ಸರ್ಕಾರ ತಕ್ಷಣಕ್ಕೆ ಎಷ್ಟು ಹಣವನ್ನು ಬಿಡುಗಡೆ ಮಾಡುತ್ತದೆ ಎಂಬ ಬಗ್ಗೆ ಮಂತ್ರಿಗಳು ದಯವಿಟ್ಟು ಹೇಳಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ತಕ್ಷಣ ಅಂದರೆ ಹೇಗೆ? ಈಗ ಸರ್ಕಾರ ಅಂದರೆ ಎರಡು ತರಹ ಇರುತ್ತದೆ. ಕನ್ನಂಬಾಡಿ ಕಟ್ಟೆಯಲ್ಲಿ ನೀರಿದೆ ಅಂದರೆ ತಕ್ಷಣ ನೀರು ಬಿಡಬೇಕು. ಎಂದಾಗ ತಕ್ಷಣ ನೀರು ಬಿಡಿ ಎಂದರೆ ಗೇಟ್‌ಗಳನ್ನು ಓಪನ್ ಮಾಡಿ ತಕ್ಷಣ ನೀರು ಬಿಟ್ಟು ಬಿಡಬಹುದು. ಆದರೆ ಈ ಖಜಾನೆಯಲ್ಲಿರೋ

ದುಡ್ಡು ಇದೆಯಲ್ಲಾ ಇದನ್ನು ಬಿಡುಗಡೆ ಮಾಡಿಸುವುದು ಅಷ್ಟೊಂದು ಸುಲಭವಾದ ಕೆಲಸವಲ್ಲ. ಅವರಿಗೂ ಈ ವಿಚಾರವೆಲ್ಲಾ ಬಹಳ ಚೆನ್ನಾಗಿ ಗೊತ್ತಿದೆ. ನಾನು ಹೇಳಿದ್ದೇನೆ. ಪ್ರಾಮಾಣಿಕವಾದ ಉತ್ತರವನ್ನು ಕೊಟ್ಟಿದ್ದೇನೆ. ನನ್ನ ಕ್ಷೇತ್ರದ ಆದಿಯಾಗಿ, ನಮ್ಮ ಅಸಿಸ್ಟೆಂಟ್ ಕಮಿಶನರ್‌ರವರನ್ನು ಈ ವಿಚಾರದಲ್ಲಿ ನಾವು ಗೋಳುಹೊಯ್ದುಕೊಂಡಿದ್ದೇವೆ. ಮಾನ್ಯ ವಿರೋಧ ಪಕ್ಷದ ನಾಯಕರಾದ ಮಾನ್ಯ ಯಡಿಯೂರಪ್ಪನವರು ಈ ಹಿಂದೆ ವಿಧಾನಪರಿಷತ್ ಸದಸ್ಯರಾಗಿದ್ದಾಗ ಕೂಡ ಶಿಕಾರಿಪುರದಲ್ಲಿ, ಶಿವಮೊಗ್ಗದಲ್ಲಿ ಇದರ ಬಗ್ಗೆ ದೊಡ್ಡ ಎಜಿಟೇಶನ್ ಮಾಡಿ 'ಉದಯ' ಟಿ.ವಿ.ಯಲ್ಲಿ 'ಈ' ಟಿ.ವಿ.ಯಲ್ಲಿ ಬಂದಿದ್ದೆಲ್ಲವನ್ನೂ ನಾನು ನೋಡಿದ್ದೇನೆ. ನಾನು ಇದನ್ನೆಲ್ಲಾ ಮಾಡಿದ್ದೇನೆ. ಸರ್ಕಾರ 23 ಕೋಟಿ ರೂಪಾಯಿಗಳನ್ನು ಒಂದೇ ಪ್ರೋಗ್ರಾಂಗೆ ಒಂದೇ ಬಾರಿಗೆ ಬಿಡಗುಡೆ ಮಾಡಬೇಕು ಎಂದರೆ ಯಾರ ಕೈಯಲ್ಲೂ ಸಹಿತ ಆಗುವುದಿಲ್ಲ. ಹಂತ ಹಂತವಾಗಿ ಆದಷ್ಟು on priority basis ಮಾಡಬಹುದು.

ಶ್ರೀ ವಾಟಾಳ್ ನಾಗರಾಜ್ : 23 ಕೋಟಿ ರೂಪಾಯಿಗಳಲ್ಲಿ ಎಷ್ಟು ಹಣವನ್ನು ನೀವು ಬಿಡುಗಡೆ ಮಾಡುತ್ತೀರಿ ಎಂಬುದನ್ನು ಹೇಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಆದಷ್ಟು ಜಾಸ್ತಿ ಎಂದು ತಿಳಿದುಕೊಳ್ಳಿ.

ಶ್ರೀ ಶಿವರಾಜ್ ಸಜ್ಜನರ್(ಹಾವೇರಿ) : ತಾವು ಈ ಯೋಜನೆಯನ್ನು ಬೇರೆ ಯೋಜನೆಗಳೊಂದಿಗೆ ಹೋಲಿಕೆ ಮಾಡಿ ನೋಡಬೇಡಿ. ಏಕೆಂದರೆ ಈ ಯೋಜನೆಯಿಂದ ನಮ್ಮ ನಿರ್ಗತಿಕ ಅಕ್ಕ ತಂಗಿಯರಿಗೆ ಅನುಕೂಲವಾಗುತ್ತದೆ. ಆದುದರಿಂದ ತಾವು ಆದ್ಯತೆ ಮೇರೆಗೆ ಅತಿ ಶೀಘ್ರದಲ್ಲಿಯೇ ಹಣ ಬಿಡುಗಡೆ ಮಾಡಬೇಕೆಂದು ತಮ್ಮಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಖಂಡಿತವಾಗಿಯೂ ನಾನು ಸದಸ್ಯರ ಭಾವನೆಗಳನ್ನು, ವಾಟಾಳ್ ನಾಗರಾಜ್‌ರವ ಭಾವನೆಗಳನ್ನು, ಮಾನ್ಯ ಯಡಿಯೂರಪ್ಪನವರ ಭಾವನೆಗಳನ್ನು ಗಮನದಲ್ಲಿಟ್ಟುಕೊಂಡು ಆದಷ್ಟು ಬೇಗ ಹಣವನ್ನು ಬಿಡುಗಡೆ ಮಾಡಿಸುವುದಕ್ಕೆ ಪ್ರಯತ್ನವನ್ನು ಮಾಡುತ್ತೇನೆ.

ಶ್ರೀ ಸಿ.ಎಂ. ಉದಾಸಿ(ಹಾನಗಲ್) : ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ಈ ಯೋಜನೆ ಕೇಂದ್ರದಿಂದ ರಾಜ್ಯ ಸರ್ಕಾರಕ್ಕೆ ವರ್ಗಾಯಿಸಲ್ಪಟ್ಟಿದೆ ಎಂದು ಇದೆ. ಹೀಗಿರುವಾಗ ಆ ಕಾರಣದಿಂದ ತಾವು ಹಣವನ್ನು ಪಾವತಿ ಮಾಡಿ ಮೊದಲಿಂದ ಬರಬೇಕಾಗಿರುವ ಹಣವನ್ನು ತಾವು ರಿ-ಇಂಬರ್ಸ್‌ಮೆಂಟ್ ಮಾಡಿಸಿಕೊಳ್ಳಬಹುದು. ಇನ್ನು ಮುಂದೆ ಹಣವನ್ನು ತಾವೇ ಕೊಡಬೇಕಾದ ಸ್ಥಿತಿ ಮುಂದುವರಿಯುವುದರಿಂದ, ಏಕೆಂದರೆ ಈ ಯೋಜನೆ ಕೇಂದ್ರದಿಂದ ರಾಜ್ಯಕ್ಕೆ ವರ್ಗಾಯಿಸಲ್ಪಟ್ಟಿರುವುದರಿಂದ ತಾವು ಅತಿ ಶೀಘ್ರದಲ್ಲಿ ಹಣವನ್ನು ಬಿಡುಗಡೆ ಮಾಡಬೇಕು. ಏಕೆಂದರೆ ನನ್ನ ಭಾಗದಲ್ಲಿಯೇ 700 ಜನರು ಅರ್ಜಿದಾರರಾಗಿದ್ದಾರೆ. ಇವರಿಗೆ ಮೂರು ವರ್ಷದಿಂದಲೂ ಹಣ ಕೊಟ್ಟಿಲ್ಲವೆಂದರೆ ಬಹಳಷ್ಟು ಸಮಸ್ಯೆ ಆ ಜನರಿಗಾಗುತ್ತದೆ. ಇಡೀ ರಾಜ್ಯಾದ್ಯಂತಲೂ ಈ ಸಮಸ್ಯೆ ಇದೆ. ನಾನು ಬಜೆಟ್ ಮೇಲೆ

ಮಾತನಾಡುವಾಗಲೂ ಇದರ ಬಗ್ಗೆ ಹೇಳಿದ್ದೇನೆ. ಆದರೆ ತಾವ್ಯಾರು ಕಾಳಜಿ ಅಷ್ಟು ತೆಗೆದುಕೊಂಡಿರಲಿಲ್ಲ. ಆದರೆ ಇವೊತ್ತು ಆ ಯೋಜನೆಯೇ ಕೇಂದ್ರದಿಂದ ರಾಜ್ಯಕ್ಕೆ ವರ್ಗಾವಣೆ ಆಗಿರುವುದರಿಂದ ಇನ್ನು ಮುಂದೆ ಈ ಯೋಜನೆಯನ್ನು ತಾವೇ ನಡೆಸಿಕೊಡಬೇಕಾಗಿರುವುದರಿಂದ ಮೊದಲಿನ ಹಣವನ್ನು ಪಡೆಯುವುದಕ್ಕೆ ಸಾಧ್ಯತೆ ಇದೆ. ರಿ–ಇಂಬರ್ಸ್‌ಮೆಂಟ್ ಮಾಡಿಸಿಕೊಳ್ಳುವುದಕ್ಕೆ ಸಾಧ್ಯತೆ ಇರುವುದರಿಂದ ಆದಷ್ಟು ಶೀಘ್ರದಲ್ಲಿ ಹಣ ಬಿಡುಗಡೆ ಮಾಡಬೇಕಿದೆಯಾದ ಕಾರಣ ಇದನ್ನು ಎಷ್ಟು ದಿವಸದಲ್ಲಿ ಬಿಡುಗಡೆ ಮಾಡುತ್ತೀರಿ ಎಂಬ ಬಗ್ಗೆ ಹೇಳಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಮಾನ್ಯ ಉದಾಸಿಯವರು ಬಹಳ ಹುಷಾರ್ ಮನುಷ್ಯ ಎಂದು ತಮಗೆ ಹೇಳಿದೆ. ಯಾವುದಾದರೂ ಒಂದು ಯೋಜನೆ ಇದ್ದರೂ ಅದರ ಸಂಪೂರ್ಣ ಉಪಯುಕ್ತತೆಯನ್ನು ಪಡೆಯುವುದು ಯಾರು ಎಂದರೆ ಮಾನ್ಯ ಉದಾಸಿಯವರು. ಇದು ಇಡೀ ರಾಜ್ಯದಲ್ಲಿಯೇ ಇವರು ಹೆಚ್ಚಿನ ಉಪಯುಕ್ತತೆಯನ್ನು ಯೋಜನೆಯಿಂದ ಆ ಕ್ಷೇತ್ರಕ್ಕೆ ಪಡೆದಿರುತ್ತಾರೆ. ಬೆಳೆ ವಿಮೆ ಯೋಜನೆಯಲ್ಲಿ ಇಡೀ ರಾಜ್ಯದಲ್ಲಿ ಮಾನ್ಯ ಉದಾಸಿಯವರು ಕ್ಷೇತ್ರ ಮತ್ತು ಮಾನ್ಯ ದೇಶಪಾಂಡೆಯವರ ಕ್ಷೇತ್ರದಲ್ಲಿ ಹೆಚ್ಚು ಅರ್ಜಿದಾರರುಗಳನ್ನು ಯೋಜನೆಗೆ ಒಳಪಡಿಸಲಾಗಿರುತ್ತದೆ. ಅದು ಹೇಗೆಂದರೆ ಕರೆಕ್ಟ್ ಪೇಮೆಂಟ್ ಆಗಿರುತ್ತದೆ, ಕರೆಕ್ಟ್ ಟೈಂನಲ್ಲಿ ಅವರು ದುಡ್ಡು ಕಟ್ಟಿಸಿರುತ್ತಾರೆ. ಏಕೆಂದರೆ ಅವರುಗಳು ಬಹಳ ಮುತುವರ್ಜಿ ವಹಿಸಿ ಕ್ಷೇತ್ರದ ಕೆಲಸಗಳನ್ನು ಮಾಡುತ್ತಾರೆ, 700 ಅರ್ಜಿಗಳು ಬಾಕಿ ಇರುವುದರಿಂದ ಸ್ವಾಭಾವಿಕವಾಗಿ ಅವರ ಬಗ್ಗೆ ಕಾಳಜಿ ಇರುವುದರಿಂದಾಗಿ ಕ್ಷೇತ್ರದ ಜನತೆ ಬಗ್ಗೆ ಅವರಿಗೆ ಕಮಿಟ್‌ಮೆಂಟ್ ಇರುವುದರಿಂದ ಇದನ್ನು ಅವರು ಹೇಳಿದ್ದಾರೆ. ನಾನು ತಕ್ಷಣ ಅಧಿವೇಶನ ಮುಗಿದ ನಂತರ ಮಾನ್ಯ ಹಣಕಾಸಿನ ಸಚಿವರೂ ಸೇರಿದಂತೆ ಈ ಬಗ್ಗೆ ಸಚಿವ ಸಂಪುಟದಲ್ಲಿ ತೀರ್ಮಾನ ಮಾಡಿ ಆದಷ್ಟು ಹಣವನ್ನು ನಾವು ಬಿಡುಗಡೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಶಿವರಾಜ್ ಸಜ್ಜನರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ ಇಂಥ ಪ್ರಸಂಗಗಳಲ್ಲಿ ಆರು ತಿಂಗಳೊಳಗೆ ಅರ್ಜಿಯನ್ನು ಸಲ್ಲಿಸಬೇಕಾಗುತ್ತದೆ. ಆ ಆರು ತಿಂಗಳೊಳಗೆ ಅರ್ಜಿಯನ್ನು ಹಾಕಿಕೊಳ್ಳದೇ ತದನಂತರ ಹಾಕಿಕೊಂಡರೆ ಆ ಅರ್ಜಿಯನ್ನು ಪರಿಗಣಿಸುವುದಕ್ಕೆ ಆಗುವುದಿಲ್ಲ ಎಂದು ಹೇಳಿರುವುದರಿಂದ ಈಗಾಗಲೇ ಹಾವೇರಿ ಜಿಲ್ಲೆಯಲ್ಲಿ ಅನೇಕ ಅರ್ಜಿಗಳನ್ನು ವಾಪಸ್ಸು ಮಾಡಿರುವ ಪ್ರಸಂಗ ನಡೆದಿದೆ. ಏಕೆಂದರೆ ಗಂಡ ಸತ್ತ ಆರು ತಿಂಗಳೊಳಗೆ ಅರ್ಜಿಯನ್ನು ಕೊಡುವ ವಿಚಾರದಲ್ಲಿ ಗಂಡನನ್ನು ಕಳೆದುಕೊಂಡ ಮಹಿಳೆಯರು ವಿಫಲರಾಗಿದ್ದಾರೆ. ಇಂಥ ಅನೇಕ ಮಹಿಳೆಯರಿಗೆ ಈ ಯೋಜನೆಯ ಫಲ ಸಿಗುತ್ತಿಲ್ಲ. ಆದಕಾರಣ ಆರು ತಿಂಗಳ ನಂತರದಲ್ಲಿ ಇದುವರೆಗೆ ಎಷ್ಟು ಮಹಿಳೆಯರಿಗೆ ಅರ್ಜಿಯನ್ನು ಕೊಟ್ಟಿದ್ದಾರೆ. ಅವೆಲ್ಲವನ್ನೂ ಲೆಕ್ಕಕ್ಕೆ ತೆಗೆದುಕೊಂಡು ಹಣ ಮಂಜೂರಾತಿ ಮಾಡಿಸುವ ವ್ಯವಸ್ಥೆಯನ್ನು ಮಾಡಿಸಿಕೊಡಬೇಕೆಂದು ವಿನಂತಿಸುತ್ತೇನೆ.

†**ಶ್ರೀ ಪಿ.ಜಿ.ಆರ್. ಸಿಂಧ್ಯಾ :** ಮಾನ್ಯ ಅಧ್ಯಕ್ಷರೆ, ಅವರ ಸಲಹೆಯನ್ನು ಸರ್ಕಾರ ಸ್ವೀಕಾರ ಮಾಡಿ ಆ ಬಗ್ಗೆ ಪರಿಶೀಲನೆಯನ್ನು ಮಾಡಲಾಗುವುದು.

ವಿಷಯ : (viii) ಸಿಂಗಟಾಲೂರು ಏಕ ನೀರಾವರಿ ಯೋಜನೆಯಿಂದ ತುಂಗಾಭದ್ರಾ ಅಣೆಕಟ್ಟೆಯಲ್ಲಿ ಬರುವ ರೈತರಿಗೆ ನೀರಿನ ಕೊರತೆ ಉಂಟಾಗಿರುವ ಬಗ್ಗೆ

ಶ್ರೀ ಎನ್.ಎಸ್. ಭೋಸರಾಜು (ಮಾನ್ವಿ) : ಮಾನ್ಯ ಅಧ್ಯಕ್ಷರೆ, ಸಿಂಗಟಾಲೂರು ನೀರಾವರಿ ಯೋಜನೆಯಿಂದ ತುಂಗಭದ್ರಾ ಅಣೆಕಟ್ಟಿಗೆ ಬರುವ ರೈತರಿಗೆ ನೀರಿನ ಕೊರತೆ ಉಂಟಾಗಿರುವ ಸಮಸ್ಯೆ ಬಗ್ಗೆ ಮಾನ್ಯ ಜಲ ಸಂಪನ್ಮೂಲ ಸಚಿವರ ಗಮನ ಸೆಳೆಯುತ್ತೇನೆ.

† **ಶ್ರೀ ಪಿ.ಜಿ.ಆರ್. ಸಿಂಧ್ಯಾ(ಭಾರಿ, ಮಧ್ಯಮ ಮತ್ತು ಸಣ್ಣ ಕೈಗಾರಿಕಾ ಸಚಿವರು) (ಜಲ ಸಂಪನ್ಮೂಲ ಸಚಿವರ ಪರವಾಗಿ) :** ಮಾನ್ಯ ಅಧ್ಯಕ್ಷರೆ,

ಕೊಪ್ಪಳ ಮತ್ತು ಗದಗ ಜಿಲ್ಲೆಯ ಬರ ಪೀಡಿತ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸುವ ಉದ್ದೇಶದಿಂದ ಈ ಯೋಜನೆಗಾಗಿ ರೂ. 595.00 ಕೋಟಿ ಮೊತ್ತದ ಸಮಗ್ರ ಯೋಜನಾ ವರದಿಯನ್ನು ತಯಾರಿಸಲಾಗಿದ್ದು. ಇದಕ್ಕೆ ಸರ್ಕಾರದ ಆದೇಶ ಸಂ : ನೀಇ:90:ಎಂಟಿಪಿ:98. ದಿನಾಂಕ 29.12.2000 ಅನ್ವಯ ಆಡಳಿತಾತ್ಮಕ ಅನುಮೋದನೆ ಹಾಗೂ ಮುಖ್ಯ ಇಂಜಿನಿಯರು, ನೀರಾವರಿ ಕೇಂದ್ರ ವಲಯ, ಮುನಿರಾಬಾದ್, ರವರಿಂದ ಮಂಜೂರಾತಿ ಸಂ; 28/2001–02 ರನ್ವಯ ತಾಂತ್ರಿಕ ಮಂಜೂರಾತಿ ನೀಡಲಾಗಿತ್ತು.

ಒಟ್ಟಾರೆ ಈ ಯೋಜನೆಗೆ 18.55 ಟಿ.ಎಂ.ಸಿ. ಅಡಿಗಳಷ್ಟು ನೀರಿನ ಹಂಚಿಕೆಯಾಗಿರುತ್ತದೆ.

ಈ ಯೋಜನೆಯಿಂದ 18.55 ಟಿ.ಎಂ.ಸಿ. ಅಡಿಗಳಷ್ಟು ನೀರನ್ನು ಉಪಯೋಗಿಸಿಕೊಂಡು ಬಳ್ಳಾರಿ, ಕೊಪ್ಪಳ, ಗದಗ ಜಿಲ್ಲೆಗಳ ಸುಮಾರು 1,18,000 ಎಕರೆ (11,67,000 ಎಕರೆ ಬೆಳೆ ಪ್ರದೇಶ) ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಬಹುದಾಗಿದೆ. ತಾಲ್ಲೂಕುವಾರು ನೀರಾವರಿ ಕ್ಷೇತ್ರದ ವಿವರಗಳು ಈ ಕೆಳಗಿನಂತಿವೆ.

ತಾಲ್ಲೂಕು	ನೀರಾವರಿ ಕ್ಷೇತ್ರ	ಬೆಳೆ ಪ್ರದೇಶ
ಹೂವಿನ ಹಡಗಲಿ (ಬಳ್ಳಾರಿ ಜಿಲ್ಲೆ)	20,000 ಎಕರೆ	28,000 ಎಕರೆ
ಮುಂಡರಗಿ (ಗದಗ ಜಿಲ್ಲೆ)	49,100 ಎಕರೆ	69,640 ಎಕರೆ
ಗದಗ (ಗದಗ ಜಿಲ್ಲೆ)	40,900 ಎಕರೆ	58,010 ಎಕರೆ
ಕೊಪ್ಪಳ (ಕೊಪ್ಪಳ ಜಿಲ್ಲೆ)	8,000 ಎಕರೆ	11,350 ಎಕರೆ
ಒಟ್ಟು	**1,18,000 ಎಕರೆ**	**1,67,000 ಎಕರೆ**
	47,754 ಹೆಕ್ಟೇರ್	**76,584 ಹೆಕ್ಟೇರ್**